

# सरयू ಸರಯೂ
## ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
APRIL Vol. : 4 Issue : 2 5119/ಹೇಮಲಂಬಿ ಸಂವತ್ಸರ ಜುಲೈ 2017 ಪುಟ 8 Rs. 10/-
Postal Regn No. PTR/135/2016-18
Licensed to Post without pre-payment
License No: SK/WPP/PTR/177/2016-18

### ಮೂವತ್ತರ ಹೊಸ್ತಿಲಲ್ಲಿ
# ಸಾವಿರದ ಸಂಭ್ರಮ

ಶ್ರೀರಾಮ ಹಿರಿಯಪ್ರಾಥಮಿಕ ಶಾಲೆ ಕಲ್ಲಡ್ಕ ಕಳೆದ 29 ವರ್ಷಗಳಿಂದ ಕನ್ನಡ ಮಾಧ್ಯಮದಲ್ಲಿ ಉಚಿತ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ನೀಡುವ ಕೆಲಸವನ್ನು ಮಾಡುತ್ತಾ ಬರುತ್ತಿದೆ. ಇದೀಗ 30ನೇ ವರ್ಷದಲ್ಲಿ 1000 ಸಂಖ್ಯೆಯನ್ನು ಮೀರಿ ಸಾವಿರದ(ಸಾವೇ ಇರದ) ಸಂಭ್ರಮದಲ್ಲಿದೆ. 1988–1989ರಲ್ಲಿ 55 ವಿದ್ಯಾರ್ಥಿಗಳಿಂದ ಆರಂಭಗೊಂಡ ಪ್ರಾಥಮಿಕ ವಿಭಾಗ ಇದೀಗ 2017–18ರಲ್ಲಿ 1064 ವಿದ್ಯಾರ್ಥಿಗಳನ್ನು ಹೊಂದಿದೆ. ಇದೀಗ 32 ವಿಭಾಗಗಳು, 43 ಬೋಧಕರನ್ನು ಹೊಂದಿದ್ದು ಇದುವರೆಗೆ 7ನೇ ತರಗತಿ ಉತ್ತೀರ್ಣರಾದವರು – 2384 ವಿದ್ಯಾರ್ಥಿಗಳು.

1988-89, 1989-90, 1990-91, 1991-92, 1992-93, 1993-94, 1994-95, 1995-96, 1996-97, 1997-98, 1998-99, 1999-2000, 2000-01, 2001-02, 2002-03, 2003-04, 2004-05, 2005-06, 2006-07, 2007-08, 2008-09, 2009-10, 2010-11, 2011-12, 2012-13, 2013-14, 2014-15, 2015-16, 2016-17, 2017-18

**2017-18**
**1064**









## ಶ್ರೀರಾಮ ಪ್ರಾಥಮಿಕ ಶಾಲೆ ಕಲ್ಲಡ್ಕ

- ತರಗತಿ ಕೊಠಡಿಗಳು–32
- ಕುಟೀರ ಮಾದರಿ–15
- ಮಧ್ಯಾಹ್ನ ಉಚಿತ ಭೋಜನ
- ಕಂಪ್ಯೂಟರ್ ಶಿಕ್ಷಣ
- ಹೊರಾಂಗಣ ಚಟುವಟಿಕೆಗಳು
- ಸ್ಥಾನೀಯ ಪಾಲಕರ ಸಭೆಗಳು
- ರಾಜ್ಯಮಟ್ಟದಲ್ಲಿ ಕ್ರೀಡಾ ಸಾಧನೆಗಳು
- ಅಖಿಲ ಭಾರತ ಮಟ್ಟದಲ್ಲಿ ವಿಜ್ಞಾನಮೇಳದ ಸಾಧನೆ
- ವರ್ಷಕ್ಕೆ 60+ ಕಾರ್ಯಕ್ರಮಗಳು
- Smart ಬೋರ್ಡ್ ತರಗತಿ
- ಉಚಿತ ಸಮವಸ್ತ್ರ, ಪುಸ್ತಕಗಳು

## ಶಿಶುಮಂದಿರ


ಶ್ರೀರಾಮ ಶಿಶುಮಂದಿರ – ಕಾರ್ಯಾಗಾರ

## ಪ್ರಾಥಮಿಕ ಶಾಲೆ


ಹಿಂದುಸಾಮ್ರಾಜ್ಯ ದಿನೋತ್ಸವ


ಯಕ್ಷಗಾನ ತರಬೇತಿ


ಜೂನ್ 23 – ವಿದ್ಯಾರ್ಥಿಗಳ ನೇತ್ರ ತಪಾಸಣೆ


ವಿಶ್ವಯೋಗ ದಿನಾಚರಣೆ

## ಪ್ರೌಢ ಶಾಲೆ


ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನೀಡಲಾದ ಸೈಕಲ್‌ಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಹಿರಿಯರು.

### ಪ್ರೌಢಶಾಲಾ ವಿಭಾಗದಲ್ಲಿ ವಿಶ್ವಯೋಗ ದಿನಾಚರಣೆ






ನಮ್ಮ ಶಾಲೆ ನಮ್ಮ ಕೈತೋಟ



ವಿಶ್ವಪರಿಸರ ದಿನಾಚರಣೆ


ತಬಲಾ–ಹಾರ್ಮೋನಿಯಂ ತರಬೇತಿ ಉದ್ಘಾಟನೆ

## ಪದವಿ ವಿಭಾಗ


ವಿಶ್ವಯೋಗ ದಿನಾಚರಣೆ


ವಿದ್ಯಾರ್ಥಿ ಸಂಘದ ಚುನಾವಣೆ

## ಪದವಿಪೂರ್ವ ವಿಭಾಗ


ವಿಶ್ವಯೋಗ ದಿನಾಚರಣೆ



## ಸುಭಾಷಿತ ಮಂಜರಿ

ಫಲಾಭಿಲಾಷೋಪಹತಾನ್ತರಾತ್ಮಾ
ಪ್ರತೀಕ್ಷತೇ ಪಾತ್ರವಿಶೇಷಮೇವ ।
ಕೃಪಾಲುಕಸ್ತ್ವರ್ಥಿತಯೈವ ತುಷ್ಟಃ
ಪ್ರವರ್ತತೇ ದೀನಜನೇಷು ದಾತುಮ್ ॥

"ಈ ಕೆಲಸ ಮಾಡುವುದರಿಂದ ನನಗೆ ಪ್ರಯೋಜನವೋ ಕೀರ್ತಿಯೋ ಸಿಗಬೇಕು –ಎಂಬ ರೀತಿಯ ಯೋಚನೆ ಯಾರ ಮನಸ್ಸಿನಲ್ಲಿ ತುಂಬಿರುತ್ತದೋ ಅವರಿಗೆ ಯಾರಿಗಾದರೂ ಉಪಕಾರ ಮಾಡುವ ಅವಕಾಶ ಎದುರಾದಾಗ ಅವರು 'ಈ ವ್ಯಕ್ತಿಯು ನನ್ನ ಸಹಾಯಕ್ಕೆ ಪಾತ್ರನೇ?' ಎಂದೆಲ್ಲ ಲೆಕ್ಕಾಚಾರ ಮಾಡತೊಡಗುತ್ತಾರೆ. ಆದರೆ ಸ್ವಭಾವತಃ ದಯಾವಂತನಾದ ವ್ಯಕ್ತಿಗೆ ತನ್ನಿಂದ ಯಾರಾದರೂ ನೆರವನ್ನು ಅಪೇಕ್ಷಿಸುತ್ತಿದ್ದಾರೆಂಬ ಪ್ರೇರಣೆಯಷ್ಟೇ ಸಾಕು. ಅವರು ಕಷ್ಟದಲ್ಲಿರುವವರಿಗೆ ಸಹಾಯವನ್ನು ನೀಡಲು ಮುಂದಾಗುತ್ತಾರೆ."

ಆತ್ಮೀಯ ಓದುಗರೇ,

ಜಗತ್ತಿನಲ್ಲಿ ಆದಿಗುರು, ಲೋಕಗುರು, ಎಂದೆನಿಸಿಕೊಂಡ ಭಗವಾನ್ ವೇದವ್ಯಾಸರ ಸ್ಮರಣೆಯಲ್ಲಿ ಆಚರಿಸುವ ಶ್ರೀ ಗುರುಪೂರ್ಣಿಮೆಯ ಶುಭಾಶಯಗಳು. ನಮ್ಮೆಲ್ಲಾ ಶೈಕ್ಷಣಿಕ ಚಟುವಟಿಕೆಗಳು ಒಂದೊಂದಾಗಿ ರಭಸ ಪಡೆಯತೊಡಗಿದೆ. ಜುಲೈ – ಆಗಸ್ಟ್ – ಸಪ್ಟೆಂಬರ್ ತಿಂಗಳುಗಳಲ್ಲಿ ನಡೆಯಬೇಕಾದ ಕಾರ್ಯಕ್ರಮಗಳ ಸಾಲು ಮೊದಲ್ಗೊಂಡಿದೆ. ತಯಾರಿಗಳು ನಡೆಯುತ್ತಿವೆ.

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಈ ಬಾರಿ ಮಹತ್ತರ ಮೈಲುಗಲ್ಲೊಂದನ್ನು ನೆಟ್ಟಿದೆ. ಮೂವತ್ತನೆಯ ವರ್ಷಕ್ಕೆ ಪದಾರ್ಪಣೆ ಮಾಡಲಿರುವ ಈ ವಿಭಾಗದ ವಿದ್ಯಾರ್ಥಿಗಳ ಸಂಖ್ಯೆ 1000ನ್ನು ದಾಟಿದೆ. ಇದಕ್ಕಾಗಿ ಸರಯೂ ಬಳಗದ ಅಭಿನಂದನೆಗಳು ಇದಕ್ಕಾಗಿ ಮಾಡಿದ ಪ್ರಯತ್ನ ಇತ್ಯಾದಿಗಳೊಂದಿಗೆ ಮುಂದಿನ ಸಂಚಿಕೆಯಲ್ಲಿ ಭೇಟಿಯಾಗೋಣ.

ವಂದನೆಗಳು

ಸಂಪಾದಕ ಬಳಗ


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ರೂಪಕಲಾ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಹರ್ಷಿತಾ (ಪಿ.ಯು.ಸಿ)
ಶೈಲಜಾ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


# ನಾವು ಕಂಡಂತೆ ಪ್ರಪಂಚ

ಚಿಂತನರಶ್ಮಿ

ಆಗ ತಾನೇ ದ್ರೋಣಾಚಾರ್ಯರು ಹಸ್ತಿನಾವತಿಗೆ ಬಂದು ಸೇರಿದ್ದರು. ಕುರು ಪಿತಾಮಹ ಭೀಷ್ಮರು ಅವರನ್ನು ಮಕ್ಕಳ ಶಿಕ್ಷಣಕ್ಕೆಂದು ನೇಮಿಸಿಕೊಂಡಿದ್ದರು. ದ್ರೋಣರು ತುಂಬ ಸೂಕ್ಷ್ಮಗ್ರಾಹಿಗಳು ಅವರು ಮಕ್ಕಳಿಗೆ ತರಬೇತಿ ನೀಡುವಾಗ ಅವರ ಮನಸ್ಸನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿದ್ದರು. ಈ ಪುಟ್ಟ ಬಾಲಕರನ್ನು ಒಬ್ಬೊಬ್ಬರನ್ನಾಗಿ ಕರೆದು ಮಾತನಾಡಿಸಿ ಅವರ ಅಂತರ್ಯವನ್ನು ತಿಳಿಯಲು ಪ್ರಯತ್ನ ಮಾಡುತ್ತಿದ್ದರು.

ಒಂದು ದಿನ ಅವರು ಬಾಲಕ ಧರ್ಮರಾಯ ಹಾಗೂ ದುರ್ಯೋಧನರನ್ನು ಕರೆದರು. 'ಮಕ್ಕಳೇ ನಿಮಗೊಂದು ಕೆಲಸವಿದೆ ಇಂದು. ನೀವಿಬ್ಬರೂ ಇಡೀ ದಿನ ಬೇರೆ ಬೇರೆಯಾಗಿ ನಗರಪ್ರದಕ್ಷಿಣೆ ಮಾಡಿ ಬರಬೇಕು. ಎಷ್ಟು ಸಾಧ್ಯವೋ ಅಷ್ಟು ಜನರನ್ನು ಭೆಟ್ಟಿಯಾಗಬೇಕು, ಅವರ ಬಗ್ಗೆ ವಿಷಯ ಸಂಗ್ರಹಿಸಬೇಕು, ಅವರ ಶಕ್ತಿಗಳ ಬಗ್ಗೆ ಅವರ ಅಶಕ್ತತೆಯ ಬಗ್ಗೆ ತಿಳಿದುಕೊಳ್ಳಬೇಕು" ಎಂದು ತಿಳಿ ಹೇಳಿ ಕಳುಹಿಸಿದರು.

ಸಾಯಂಕಾಲ ಮಕ್ಕಳು ಮರಳಿ ಬಂದರು. ತಕ್ಷಣ ಅವರನ್ನು ಮಾತನಾಡಿಸದೇ ರಾತ್ರಿ ಊಟವಾದ ಮೇಲೆ ಚರ್ಚಿಸೋಣ ಎಂದು ಹೇಳಿ ನಡೆದರು. ಧರ್ಮರಾಜ ಮತ್ತು ದುರ್ಯೋಧನ ಇಬ್ಬರೂ ತಮ್ಮ ಅನುಭವಗಳನ್ನು ಹೇಳಲು ಕಾತರರಾಗಿದ್ದರು, ರಾತ್ರಿ ಆಚಾರ್ಯ ದ್ರೋಣ–ರು ಮೊದಲಿಗೆ ಧರ್ಮರಾಜರನ್ನು ಕರೆದು ಅವನ ಅನುಭವವನ್ನು ಹೇಳಲು ತಿಳಿಸಿದರು.

"ಗುರುಗಳೇ ನಮ್ಮ ಹಸ್ತಿನಾವತಿಯಂಥ ಸಮೃದ್ಧನಗರ ಯಾವುದೂ ಇರಲಿಕ್ಕಿಲ್ಲ. ನಾನು ಕಂಡ ಪ್ರತಿಯೊಬ್ಬ ವ್ಯಕ್ತಿ ಧರ್ಮಿಷ್ಠನಾಗಿದ್ದ, ಸುಸಂಸ್ಕೃತನಾಗಿದ್ದ. ಅವನಲ್ಲಿ ಪರಿಶ್ರಮ ಮಾಡುವ ಮನಸ್ಸಿತ್ತು. ಯಾರಲ್ಲೂ ಮತ್ತೊಬ್ಬರಿಗೆ ಮೋಸ ಮಾಡುವ ಬುದ್ಧಿ ಕಾಣಲಿಲ್ಲ, ಅವರಲ್ಲಿ ತಮ್ಮ ನಾಡಿನ ಬಗ್ಗೆ, ರಾಜರ ಬಗ್ಗೆ ತುಂಬ ಅಭಿಮಾನ ಹಾಗೂ ಗೌರವ' ಎಂದು ಸಂಭ್ರಮದಲ್ಲಿ ನುಡಿದ. "ಹಾಗಾದರೆ ಅವರಲ್ಲಿ ಯಾವ ದೌರ್ಬಲ್ಯವೂ ಇರಲಿಲ್ಲವೇ?" ಕೇಳಿದರು ದ್ರೋಣರು. "ಇಲ್ಲ ಗುರುಗಳೇ ನನಗೆ ಯಾವ ದೌರ್ಬಲ್ಯಗಳೂ ಕಾಣಲಿಲ್ಲ. ಹಾಗೆ ನೋಡಿದರೆ ನನ್ನಲ್ಲೇ ಅನೇಕ ಕೊರತೆಗಳು ಕಂಡವು. ನಾನು ಕಂಡವರೆಲ್ಲರೂ ನನಗಿಂತ ಒಳ್ಳೆಯವರಾಗಿಯೇ ಇದ್ದರು" ಎಂದು ನುಡಿದ ಧರ್ಮರಾಜ.

ನಂತರ ಆಚಾರ್ಯರು ದುರ್ಯೋಧನನ್ನು ಕರೆದು ಅದೇ ಪ್ರಶ್ನೆ ಮಾಡಿದರು. ಅದಕ್ಕೆ ಅವನು, "ಗುರುಗಳೇ, ನಮ್ಮ ರಾಜ್ಯದ ಪರಿಸ್ಥಿತಿ ಚೆನ್ನಾಗಿಲ್ಲ. ನಾನು ಎಷ್ಟೊಂದು ಜನರನ್ನು ಕಂಡೆ. ಅವರೆಲ್ಲ ದುರಾಚಾರಿಗಳು, ಅನಾಚಾರಿಗಳು, ಅಪಚಾರಿಗಳು ಮತ್ತು ಅತ್ಯಾಚಾರಿಗಳು. ಒಬ್ಬರಲ್ಲಿಯೂ ಧರ್ಮಬುದ್ಧಿ ಇಲ್ಲ. ಸದಾ ಮತ್ತೊಬ್ಬರಿಗೆ ಮೋಸ ಮಾಡುವ ಹೊಂಚಿನಲ್ಲೇ ಇದ್ದಾರೆ. ಕಪಟ, ವಂಚನೆಗಳೇ ಅವರ ಬಂಡವಾಳಗಳಾಗಿವೆ" ಎಂದ. "ಅಲ್ಲಪ್ಪ, ಅವರಲ್ಲಿ ಯಾವ ಒಳ್ಳೆ ಗುಣಗಳನ್ನೂ ನೀನು ಕಾಣಲಿಲ್ಲವೇ" ಎಂದು ಆಶ್ಚರ್ಯದಿಂದ ಕೇಳಿದರು ಗುರುಗಳು. "ಇಲ್ಲ ಗುರುಗಳೇ ಅವರಲ್ಲಿ ಯಾರೂ ಒಳ್ಳೆಯವರಾಗಿರಲಿಲ್ಲ. ಬಹುಶಃ ನಾನೊಬ್ಬನೇ ಪರಿಪೂರ್ಣ ವ್ಯಕ್ತಿ. ನಾನು ಕಂಡವರಲ್ಲಿ ಯಾರೊಬ್ಬರೂ ನನ್ನ ವ್ಯಕ್ತಿತ್ವದ ಹತ್ತಿರ ಕೂಡ ಬರುವುದು ಸಾಧ್ಯವಿರಲಿಲ್ಲ" ಎಂದು ದುರ್ಯೋಧನ ಹೆಮ್ಮೆಯಿಂದ ಹೇಳಿದ. ಗುರುಗಳು ನಿಟ್ಟುಸಿರುಬಿಟ್ಟು ನುಡಿದರು, " ಮಗೂ ನೀನು ಹೇಗಿದ್ದಿಯೋ ಸಮಾಜ ಹಾಗಿರುತ್ತದೆ".

ಪ್ರಪಂಚ ಕನ್ನಡಿ ಇದ್ದಂತೆ. ಅಲ್ಲಿ ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ. ನಾವು ಯಾವುದನ್ನು ಕಾಣಬೇಕೆನ್ನುತ್ತೇವೋ ಅದೇ ಸಿಗುತದೆ. ಕಣ್ಣಲ್ಲಿ ಬರೀ ಕೊಳಕು ತುಂಬಿಕೊಂಡು ನೋಡಿದರೆ ಕೊಳಕೇ ಕಾಣುತ್ತದೆ. ನಿರ್ಮಲವಾದ ಮನಸ್ಸಿನಿಂದ ಕಂಡರೆ ಸುಂದರವಾದದ್ದು ಸಿಗುತ್ತದೆ. ನಾವು ಏಕೆ ಹುಡುಕಾಡಿ, ಹುಡುಕಾಡಿ ಕೆಟ್ಟದ್ದನ್ನೇ ನೋಡಿ, ಕೇಳಿ ಮನಸ್ಸನ್ನು ಕಸದ ಬುಟ್ಟಿಯನ್ನಾಗಿಸಿಕೊಳ್ಳಬೇಕು? ಸದಾ ಒಳ್ಳೆಯದನ್ನು ನೋಡುವ, ಮಾತನಾಡುವ, ತಿಳಿಯುವ ಪ್ರಯತ್ನ ಮಾಡುತ್ತಿದ್ದರೆ ಕನಿಷ್ಠ ನಮ್ಮ ಸುತ್ತಮುತ್ತಲಿನ ವಾತಾವರಣವಾದರೂ ನಿರ್ಮಲವಾಗಿರುತ್ತದೆ.

# ಶಿಶುಮಂದಿರ

**ಸರಸ್ವತಿ ಶಿಶುಮಂದಿರ, ಶೇಡಿಗುರಿ**

ದಿನಾಂಕ 1/6/2017 ರಂದು ಪಾಣೆಮಂಗಳೂರು ಭಯಂಕೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ನಿಮಿತ್ತ ಶಿಶುಮಂದಿರದ ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಲಾಗಿತ್ತು

ದಿನಾಂಕ 13/6/2017 ರಂದು ಶಿಶುಮಂದಿರದ ನೂತನ ಕಟ್ಟಡದಲ್ಲಿ ವಾಸ್ತುಹೋಮ ನಡೆಯಿತು ಮರುದಿನ ನೂತನ ಶಿಶುಮಂದಿರದಲ್ಲಿ ಗಣಹೋಮ ನಡೆಯಿತು . ಈ ಕಾರ್ಯಕ್ರಮದಲ್ಲಿ ಶ್ರೀಯತ ಡಾ.ಪ್ರಭಾಕರ್ ಭಟ್ ಮತ್ತು ಶ್ರೀಮತಿ ಡಾ.ಕಮಲಾ ಪ್ರಭಾಕರ್ ಭಟ್ ಉಪಸ್ಥಿತರಿದ್ದರು ಹಾಗೂ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರು ಶ್ರೀ ನಾರಾಯಣ ಸೋಮಯಾಜಿ ಮತ್ತು ಸಂಚಾಲಕರಾದ ಶ್ರೀ ವಸಂತ ಮಾಧವರು ಮತ್ತು ಶ್ರೀರಾಮ ಶಾಲೆಯ ಪ್ರಮುಖರು ಆಗಮಿಸಿದ್ದರು. ಮಕ್ಕಳು ಪಾಲಕರು ಸೇರಿ 70 ಮಂದಿ ಭಾಗವಹಿಸಿದ್ದರು. ವಾಸ್ತುಹೋಮ ಮತ್ತು ಗಣಹೋಮ ಪೂಜೆಯನ್ನು ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ಮತ್ತು ಬಳಗದವರು ನೆರವೇರಿಸಿಕೊಟ್ಟರು.

28/3/17 ರಂದು ಸರಸ್ವತಿ ಶಿಶುಮಂದಿರದಲ್ಲಿ ವರಮಹಾಲಕ್ಷ್ಮಿ ಪೂಜೆ ನಡೆಸುವ ಬಗ್ಗೆ ಬೈಠಕ್ ನಡೆಯಿತು. ಗಂಗಾ ಮಾತಾಜಿ ಆಗಮಿಸಿ ಪೂಜೆಯ ಮಹತ್ವ ತಿಳಿಸಿದರು. ಒಟ್ಟು 11 ಪಾಲಕರು ಉಪಸ್ಥಿತರಿದ್ದರು.

**ಶ್ರೀರಾಮ ಶಿಶುಮಂದಿರ ಕಲ್ಲಡ್ಕ**

ಶೀರಾಮ ಶಿಶುಮಂದಿರ ಕಲ್ಲಡ್ಕದಲ್ಲಿ ಪಾಲಕರಿಗೆ ಶಿಶುಶಿಕ್ಷಣ ಕಾರ್ಯಗಾರವನ್ನು 3 ವಿಭಾಗದಲ್ಲಿ ಮಾಡಲಾಯಿತು. ಒಟ್ಟು 89 ಪಾಲಕರು ಭಾಗವಹಿಸಿದ್ದರು. ಹಾಗೆಯೇ ಸರಸ್ವತಿ ಶಿಶುಮಂದಿರ ಶೇಡಿಗುರಿಯಲ್ಲಿ ಪಾಲಕರಿಗೆ ಕಾರ್ಯಾಗಾರ ಮಾಡಲಾಯಿತು. 8 ಪಾಲಕರು ಉಪಸ್ಥಿತರಿದ್ದರು.ಭಗಿನಿ ಗಂಗಾ ಮಾತಾಜಿಯವರು ಕಾರ್ಯಾಗಾರವನ್ನು ನಡೆಸಿಕೊಟ್ಟರು.

# ಪ್ರಾಥಮಿಕ ಶಾಲೆ

**ಬಂಕಿಮ ಚಂದ್ರ ಚಟರ್ಜಿಯವರ ಜನ್ಮದಿನಾಚರಣೆ**



ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ವೇದವ್ಯಾಸ ಧಾನ್ಯ ಮಂದಿರದಲ್ಲಿ ಬಂಕಿಮ ಚಂದ್ರ ಚಟರ್ಜಿಯವರ ಜನ್ಮ ದಿನಾಚರಣೆಯನ್ನು ದಿನಾಂಕ 27/06/2017ರಂದು ಅವರ ಭಾವಚಿತ್ರಕ್ಕೆ ಮಕ್ಕಳು ಮತ್ತು ಮಾತಾಜಿಯವರು ಪುಷ್ಪಾರ್ಚನೆಗೈಯುವುದರ ಮೂಲಕ ಆಚರಿಸಲಾಯಿತು. ಶ್ರೀಮತಿ ಜಯಶ್ರೀ ಮಾತಾಜಿಯವರು ಬಂಕಿಮ ಚಂದ್ರ ಚಟರ್ಜಿಯವರ ಬಗ್ಗೆ ಮಕ್ಕಳಿಗೆ ತಿಳಿಸಿದರು. ದಿನ ನಿತ್ಯಪಠಿಸುವ ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

**ಮತದಾನ**

23.06.2017ರಂದು 2017–18ನೇ ಶೈಕ್ಷಣಿಕ ಸಾಲಿನ ಸಂಸತ್ತಿಗಾಗಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ವಿವಿಧ ಖಾತೆಗಳಿಗೆ ಒಟ್ಟು 40 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. 480 ಮತದಾರರು ಮತ ಚಲಾಯಿಸಿದರು.

**ಹಿಂದೂ ಸಾಮ್ರಾಜ್ಯ ದಿನೋತ್ಸವ**

ದಿನಾಂಕ 10.06.2017 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀರಾಮ ಪದವಿ ಕಾಲೇಜಿನ ಕನ್ನಡ ಉಪನ್ಯಾಸಕ ಯತಿರಾಜ್ ಮಾತನಾಡಿ, ಹಿಂದೂ ಧರ್ಮ ಸನಾತನವಾದುದು, ಯಾವುದೇ ಕಟ್ಟುಪಾಡುಗಳಿಲ್ಲದೆ ಸಮೃದ್ಧವಾದುದು, ಹಿಂದೂ ಧರ್ಮಕ್ಕೆ ಪುನಶ್ಚೇತನ ನೀಡಿದವರು ಛತ್ರಪತಿ ಶಿವಾಜಿ ಮಹಾರಾಜರು. ಅವರ ಆದರ್ಶಗಳನ್ನು ನಾವು ಮೈಗೂಡಿಸಿಕೊಂಡು ಹಿಂದೂ ಸಮಾಜಕ್ಕೆ ದಾರಿದೀಪವಾಗಬೇಕೆಂದು ಮಕ್ಕಳಿಗೆ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನ್ಯಾಯವಾದಿ ಶಿವಗಿರಿ ಸತೀಶ್ ಭಟ್, ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ನೇಹಾ ಮಾತಾಜಿ ನಿರೂಪಿಸಿ, ಸೌಮ್ಯ ಮಾತಾಜಿ ಸ್ವಾಗತಿಸಿ, ಶಶಿಕಲಾ ಮಾತಾಜಿ ಧನ್ಯವಾದಗೈದರು.

**ಪೋಷಕರ ಸಭೆ**

ಶ್ರೀರಾಮ ಹಿರಿಯ ಪ್ರಾಥಮಿಕ ಕಲ್ಲಡ್ಕ ಇಲ್ಲಿ



ಒಂದನೇ ತರಗತಿ ವಿದ್ಯಾರ್ಥಿಗಳ ಪೋಷಕರ ಸಭೆಯು ಕೇದಾರ ಕಟ್ಟಡದ ಭರತ ಸಭಾಭವನದಲ್ಲಿ ನಡೆಯಿತು. ಸಭೆಯಲ್ಲಿ ಪ್ರಸ್ತುತ ನೀಡುತ್ತಿರುವ ಚಟುವಟಿಕೆಯಾಧಾರಿತ ಶಿಕ್ಷಣ(ಪಂಚಮುಖಿ ಶಿಕ್ಷಣ)ದ ಕುರಿತು ಶ್ರೀಯುತ ಪ್ರಭಾಕರ ಭಟ್ ಕಲ್ಲಡ್ಕ ಪೋಷಕರಿಗೆ ಮಾರ್ಗದರ್ಶನ ನೀಡಿದರು. ಪರಸ್ಪರ ಮುಕ್ತ ಸಂವಾದದ ಮೂಲಕ ಸಭೆಯು ಬಹಳ ಚೆನ್ನಾಗಿ ನಡೆಯಿತು.

ಸಭೆಯಲ್ಲಿ ವಿದ್ಯಾಕೇಂದ್ರದ ಸಂಚಾಲಕ ವಸಂತ ಮಾಧವ, ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶಿವಗಿರಿ ಸತೀಶ್ ಭಟ್, ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ವೇದ ಪಾಠ**

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ



ಕಲ್ಲಡ್ಕದ ಭರತ ಸಭಾ ಭವನದಲ್ಲಿ ವೇದ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ವೇದ ಶಿಕ್ಷಕರಾದ ಅರುಣ್ ಕುಮಾರ್ ಪೆರ್ಲ (ಕಲಾಶ್ರಯ ಕಶೆಕೋಡಿ) ದೀಪಬೆಳಗಿಸಿ ಭಾರತ ಮಾತೆಗೆ ಅರ್ಚನೆ ಮಾಡುವ ಮೂಲಕ ವೇದ ಶಿಬಿರವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷರಾದ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಶಿವಗಿರಿ ಸತೀಶ್ ಭಟ್ ನಮ್ಮ ವಿದ್ಯಾಭ್ಯಾಸದ ಸಂದರ್ಭದಲ್ಲಿ ವೇದವನ್ನು ಕಲಿಯುವ ಅವಕಾಶ ಎಲ್ಲರಿಗೂ ಇರಲಿಲ್ಲ, ಪ್ರಸ್ತುತ ವಿದ್ಯಾರ್ಥಿಗಳಿಗೆ ವೇದದ ಅರಿವು ಮತ್ತು ಜ್ಞಾನ ದೊರೆಯಬೇಕು ಎಂಬ ದೃಷ್ಟಿಯಿಂದ ಈ ಅವಕಾಶವನ್ನು ಆಸಕ್ತ ಎಲ್ಲಾ ವಿದ್ಯಾರ್ಥಿಗಳಿಗೆ ಮಾಡಿಕೊಡಲಾಗಿದೆ ಈ ಅವಕಾಶದ ಪ್ರಯೋಜನವನ್ನು ಪಡೆದುಕೊಳ್ಳಿ ಎಂದು ಶುಭ ಹಾರೈಸಿದರು.

ಈ ಸಂಧರ್ಭದಲ್ಲಿ ಉಪಸ್ಥಿತರಿದ್ದ ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಪ್ರತೀ ಶನಿವಾರ ನಡೆಯುವ ವೇದ ತರಗತಿಯ ಯಾವುದೇ ತರಗತಿಗೆ ತಪ್ಪಿಸದೇ ಪೂರ್ತಿ ತರಗತಿಯಲ್ಲಿ ಉತ್ತಮವಾಗಿ ಭಾಗಿಯಾಗಿ ತಮ್ಮ ಸಂಶಯಗಳನ್ನು ಪರಿಹರಿಸಿಕೊಂಡು ವೇದ ತರಗತಿಯನ್ನು ಪ್ರಾರಂಭಿಸಿದ ಹಿರಿಯರ ಕನಸನ್ನು ನನಸಾಗಿಸಿ ಎಂದು ಆಶೀರ್ವದಿಸಿದರು.

ಕಾರ್ಯಕ್ರಮವನ್ನು ಅನ್ನಪೂರ್ಣ ಮಾತಾಜಿ ನಿರ್ವಹಿಸಿದರು.

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರಾಟೆ ತರಗತಿಯು ಶಾಲಾ ಮುಖ್ಯ ಗುರುಗಳಾದ ಶ್ರೀ ರವಿರಾಜ್ ಇವರ ಸಮ್ಮುಖದಲ್ಲಿ ಶ್ರೀಯುತ ದರ್ಣಪ್ಪ ಕೇಪು ಮತ್ತು ಅವರ ಶಿಷ್ಯರಾದ ಶ್ರೀ ದಿನೇಶ್‌ರವರಿಂದ ಸುಮಾರು 120 ವಿದ್ಯಾರ್ಥಿಗಳಿಗೆ ಕೇದಾರ ಕಟ್ಟಡದ ಸಭಾಂಗಣದಲ್ಲಿ ಪ್ರಾರಂಭಗೊಂಡಿತು. ಜೊತೆಗೆ ಯಕ್ಷಗಾನ ತರಗತಿಯು ಮಾತಾಜಿಯವರಾದ ವೀಕ್ಷಿತಾ ಇವರಿಂದ ಪ್ರಾರಂಭಗೊಂಡಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀರಾಮ ವಿದ್ಯಾಕೇಂದ್ರದ ಕೋಶಧಿಕಾರಿ ಶಿವಗಿರಿ ಸತೀಶ್ ಭಟ್ ಇವರು ನೆರವೇರಿಸಿದರು.ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀಯತ ಪಿ ಕೆ ಪದ್ಮನಾಭ ಮುಖ್ಯ ಗುರುಗಳಾದ ಶ್ರೀ ರವಿರಾಜ್ ಉಪಸ್ಥಿತರಿದ್ದರು

## ಪ್ರೌಢಶಾಲೆ

**ಹಿಂದು ಸಾಮ್ರಾಜ್ಯ ದಿನ** ದಿ: 10.06.2017



16ನೇ ಶತಮಾನದಲ್ಲಿ ಪರಕೀಯರ ದಾಳಿಯನ್ನು ಎದುರಿಸಿ ಹಿಂದವಿ ಸಾಮ್ರಾಜ್ಯದ ಸ್ಥಾಪನೆ ಗೈದ ಹಿಂದು ಧ್ರುವತಾರೆ ಶಿವಾಜಿ. ಜೀಜಾಬಾಯಿ ಹಾಗೂ ಗುರುವಿನ ಮಾರ್ಗದರ್ಶನದಿಂದ ರಾಷ್ಟ್ರ ಹಾಗೂ ಧರ್ಮ ರಕ್ಷಣೆಗೈದ ಶ್ರೇಷ್ಠ ದೊರೆ ಶಿವಾಜಿ ನಮ್ಮೆಲ್ಲರಿಗೂ ಪ್ರೇರಣೆ ಎಂದು ಶ್ರೀ ಮನೋಜ್, ಸಹಶಿಕ್ಷಕರು ಶ್ರೀರಾಮ ಪ್ರೌಢಶಾಲೆ ತಿಳಿಸಿದರು.

ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ಹಿಂದು ಸಾಮ್ರಾಜ್ಯೋತ್ಸವ ದಿನದ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಬೌದ್ಧಿಕ್ ನೀಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಶ್ರೀಮಾನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಅರ್ಚನಾ 9 ಭಾಸ್ಕರ ನಿರೂಪಿಸಿ, ವೀಕ್ಷಿತಾ 10 ಚ್ಯವನ ವಂದಿಸಿದರು.

**ಸಂಸ್ಕೃತ ಸಂಭಾಷಣಾ ಶಿಬಿರ** 08–06–2017

ದೇವಭಾಷೆ ಎಂದು ಹೇಳಲ್ಪಡುವ ಭಾಷೆ ಸಂಸ್ಕೃತ ಭಾಷೆ. ಇತ್ತೀಚಿಗೆ ಸಂಸ್ಕೃತ ಭಾಷೆ ಕಣ್ಮರೆಯಾಗುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳು ಸಂಸ್ಕೃತವನ್ನು ಮಾತನಾಡುವ ಮುಖಾಂತರ ಸಂಸ್ಕೃತ ಭಾಷೆಯನ್ನು ಬೆಳೆಸುವ ಕಾರ್ಯದಲ್ಲಿ ನಾವೆಲ್ಲ ತೊಡಗಬೇಕು ಎಂದು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಶ್ರೀಮಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಯರಾಮ್ ಶ್ರೀಮಾನ್ ಶಿಬಿರದ ಆರಂಭವನ್ನು ಮಾಡಿದರು. ಶಿಬಿರಾರ್ಥಿಗಳಾದ ಅನಘಾ ಸ್ವಾಗತಿಸಿ, ರೋಶ್ನಿ ಪ್ರಾರ್ಥಿಸಿ, ಸ್ವಾತಿ ಲಕ್ಷ್ಮೀ ಧನ್ಯವಾದ ಮಾಡಿದರು, ಕಾರ್ಯಕ್ರಮದ ನಿರೂಪಣೆ ದಿಶಾ ಮಾಡಿದರು. ಕಾರ್ಯಕ್ರಮ ಹತ್ತು ದಿನಗಳ ಕಾಲ ವ್ಯವಸ್ಥಿತವಾಗಿ ನಡೆಯಿತು. 120 ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡರು.

**ಚಿತ್ರಕಲಾ ಸ್ಪರ್ಧೆ** 05.06.2017

ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ವಿಜಯಕರ್ನಾಟಕ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇದರ ವತಿಯಿಂದ



ಪ್ರೌಢಶಾಲಾ ವಿಭಾಗದಲ್ಲಿ 'ನಾನು ಮತ್ತು ಪರಿಸರ' ಎಂಬ ವಿಷಯದ ಬಗ್ಗೆ ಚಿತ್ರಕಲಾ ಸ್ಪರ್ಧೆ ಏರ್ಪಟ್ಟಿತು. ಸ್ಪರ್ಧೆಯಲ್ಲಿ ಒಟ್ಟು 50 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**ನಮ್ಮ ಶಾಲೆ ನಮ್ಮ ಕೈತೋಟ**

ನಮ್ಮ ಶಾಲೆ ನಮ್ಮ ಕೈತೋಟ' ಎಂಬ ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಮುಂಭಾಗದ ಆವರಣದಲ್ಲಿರುವ ಕೈತೋಟದಲ್ಲಿ ಪ್ರೌಢ ವಿಭಾಗದ ವಿದ್ಯಾರ್ಥಿಗಳಿಗೆ ವಿವಿಧ ತರಕಾರಿ, ಬಾಳೆಗಿಡ ಬೆಳೆಯುವ ಬಗ್ಗೆ ತರಬೇತಿ ನೀಡಲಾಯಿತು. ಈ ಸಂದರ್ಭದಲ್ಲಿ ಮಲ್ಲಿಗೆ ಕೃಷಿಗೆ ಬೇಕಾದ ಪೂರ್ವ ತಯಾರಿಯನ್ನು ನಡೆಸಲಾಯಿತು.

**ವಿಶ್ವ ಪರಿಸರ ದಿನ : 05.06.2017**

ಪರಿಸರದ ಕೊಡುಗೆ ಮನುಷ್ಯನ ಬದು–ಕಿಗೆ ಅಪಾರವಾಗಿದೆ. ಆದರೆ ಇಂದು ತಾಂತ್ರಿಕ ಕಾರಣದಿಂದ ಮಾನವನಿಗೆ ಹಣದ ದುರಾಸೆ ಹೆಚ್ಚಾಗಿದೆ. ಇದರ ಪರಿಣಾಮ ಪರಿಸರದ ಮೇಲೆ ಬಿದ್ದು ಪರಿಸರ ಸಮತೋಲನ ತಪ್ಪುತ್ತದೆ. ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇದನ್ನು ತಪ್ಪಿಸಲು ಪರಿಸರ ಸಂರಕ್ಷಣೆ ಅತೀ ಅವಶ್ಯಕ. ಪರಿಸರ ಸಂರಕ್ಷಣೆ ಕೇವಲ ಪರಿಸರ ದಿನಕ್ಕೆ ಸೀಮಿತವಾಗದೆ ದಿನಂಪ್ರತಿ ಪರಿಸರ ಉಳಿಸುವ ಕಾರ್ಯವಾಗಬೇಕು ಎಂದು ಶ್ರೀಮತಿ ಗಾಯತ್ರಿ ಸಹಶಿಕ್ಷಕಿ ಶ್ರೀರಾಮ ಪ್ರೌಢಶಾಲೆ ತಿಳಿಸಿದರು.

ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆದ ಪರಿಸರ ದಿನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ರಾಮ್‌ದಾಸ್, ಹಿರಿಯ ವಿದ್ಯಾರ್ಥಿ ಆಗಮಿಸಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕರಾದ ಶ್ರೀ ರಮೇಶ್ ಎನ್ ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ರಾಮ್‌ದಾಸ್ ಸಾಂಕೇತಿಕವಾಗಿ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ವಿತರಣೆಯೂ ನೆರವೇರಿತು.

ಕಾರ್ಯಕ್ರಮವನ್ನು ಶ್ರೀ ಜಿನ್ನಪ್ಪ ಶ್ರೀಮಾನ್ ನಿರೂಪಿಸಿ, ಶ್ರೀ ಗೋಪಾಲ್ ಶ್ರೀಮಾನ್ ಸ್ವಾಗತಿಸಿ, ಶ್ರೀಮತಿ ಸರ್ವಮಂಗಳ ಮಾತಾಜಿ ವಂದಿಸಿದರು.

**ಯೋಗ ದಿನಾಚರಣೆ ವರದಿ**

ಆಧುನಿಕ ಯುಗದಲ್ಲಿ ಮನುಷ್ಯ ಒತ್ತಡಗಳ ಸುಳಿಯಲ್ಲಿ ಸಿಲುಕಿದ್ದಾನೆ. ಇಂತಹ ಒತ್ತಡವನ್ನು ಯೋಗ ನಿವಾರಿಸುತ್ತದೆ. ಧನಾತ್ಮಕ ಮತ್ತು ಋಣಾತ್ಮಕ ಚಿಂತನೆಗಳು ಮನುಷ್ಯನ ಚಿತ್ತದಲ್ಲಿ ಸಾಮಾನ್ಯವಾಗಿ ಇರುತ್ತದೆ. "ಯೋಗ ಚಿತ್ತ ವೃತ್ತಿ ನಿರೋಧಕ" ಎಂಬಂತೆ ಮನುಷ್ಯನ ಋಣಾತ್ಮಕ ಭಾವನೆಗಳನ್ನು ದೂರಗೊಳಿಸಿ ಧನಾತ್ಮಕ ಚಿಂತನಗಳನ್ನು ಮೈಗೂಡಿಸಿಕೊಳ್ಳಲು ಯೋಗ ಸಹಕಾರಿ. ಎಂದು ಯೋಗದ ಮಹತ್ವವನ್ನು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತಮಾಧವ ಶ್ರೀಮಾನ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್ಟ್ಸ್ ಆಫ್ ಲಿವಿಂಗ್‌ನ ಶಿಕ್ಷಕರಾದ ಸಿ.ರಂಜನ್, ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಶ್ರೀಮಾನ್, ಶಾಲಾ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶಾರೀರಿಕ ಶಿಕ್ಷಕರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯರವರ ಉಪಸ್ಥಿತಿಯಲ್ಲಿ ಯೋಗ ಪ್ರಾತ್ಯಕ್ಷಿಕೆ ನಡೆಯಿತು.



ಶಾಲಾ ವಿದ್ಯಾರ್ಥಿಗಳಾದ ಕುಮಾರಿ ಯತಿಕಾ ಸ್ವಾಗತಿಸಿದರು. ಕುಮಾರಿ ಶಮಿತ ವಂದಿಸಿದರು. ಶಾರೀರಿಕ ಶಿಕ್ಷಕರಾದ ಪುರುಷೋತ್ತಮ ಕಾರ್ಯಕ್ರಮ ನಿರೂಪಿಸಿದರು.

**ಪಠ್ಯಪುಸ್ತಕ ಹಾಗೂ ಬರೆಯುವ ಪುಸ್ತಕ ವಿತರಣೆ**

ದಿನಾಂಕ 05.06.2017ರಂದು ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಬರೆಯುವ ಪುಸ್ತಕಗಳನ್ನು ವಿತರಿಸಲಾಯಿತು. ಶ್ರೀ ರಾಮ್‌ಪ್ರಸಾದ್ ಇಂಜಿನಿಯರ್ ಹಾಗೂ ಹಿರಿಯ ವಿದ್ಯಾರ್ಥಿಗಳಿಂದ ಪುಸ್ತಕವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ರಮೇಶ ಎನ್ ಉಪಸ್ಥಿತರಿದ್ದರು.

**ತಬಲ ಹಾರ್ಮೋನಿಯಂ ತರಗತಿ** ದಿ:22.06.2017

ಶ್ರೀರಾಮ ಪ್ರೌಢಶಾಲಾ ವಿಭಾಗದ ತಬಲ–ಹಾರ್ಮೋನಿಯಂ ತರಗತಿ ದಿನಾಂಕ 22.06.2017ರಂದು ಉದ್ಘಾಟನೆಯಾಯಿತು. ತರಬೇತುದಾರರಾದ ಶ್ರೀ ದೇವದಾಸ ಪ್ರಭು ಬಂಟ್ವಾಳ ಉದ್ಘಾಟನೆ ನೆರವೇರಿಸಿದರು. ಒಟ್ಟು 28 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆ–ಯುತ್ತಿದ್ದಾರೆ.

# ಪದವಿ ಪೂರ್ವ

**ವಿಶ್ವ ಯೋಗ ದಿನಾಚರಣೆ:–**

ದಿನಾಂಕ 21–06–2017 ರಂದು ರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಕ್ರೀಡಾ ಘಟಕದ ವತಿಯಿಂದ ಶ್ರೀರಾಮ ಪದವಿಪೂರ್ವ ಕಾಲೇಜ್ ಕಲ್ಲಡ್ಕದಲ್ಲಿ ರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಆಡಳಿತ ಮಂಡಳಿಯ ಸದಸ್ಯೆಯಾದ ಮಲ್ಲಿಕಾ ಶೆಟ್ಟಿ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಆರ್ಟ್ ಆಫ್ ಲಿವಿಂಗ್‌ನ ಸದಸ್ಯರಾದ ಜೆ ಕೆ ರಾಘವರವರು ಉಪಸ್ಥಿತರಿದ್ದರು. ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ವಿಲಾಸಿನಿ ಮಾತಾಜಿಯವರು ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಅನುಷಾ ಆನಂದ್ ರವರು ಯೋಗದ ಪ್ರಾಮುಖ್ಯತೆ ಹಾಗೂ ಸೂಕ್ಷ್ಮ ವ್ಯಾಯಾಮಗಳ ಆಸನಗಳನ್ನು ಪ್ರದರ್ಶಿಸಿದರು. ಕ್ರೀಡಾ ಘಟಕದ ಮುಖ್ಯಸ್ಥರಾದ ಶ್ರೀಯುತ ಕರುಣಾಕರ ಶ್ರೀಮಾನ್ ಕಾರ್ಯಕ್ರಮವನ್ನು ನಿರ್ವಹಿಸಿ, ಇತಿಹಾಸ ಉಪನ್ಯಾಸಕರಾದ ತಿರುಮಲೇಶ್ವರ ಪ್ರಶಾಂತ್ ರವರು ವಂದಿಸಿದರು.

**ಕಾಲೇಜು ಚುನಾವಣೆ**

ಶ್ರೀರಾಮ ಪದವಿಪೂರ್ವ ಕಾಲೇಜಿನ 2017–18 ನೇ ಸಾಲಿನ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ದಿನಾಂಕ 24.06.2017ನೇ ಶನಿವಾರದಂದು ನಡೆಸಲಾಯಿತು. ಮತಗಳ ಎಣಿಕೆ ಕಾರ್ಯವು ಅಂದೇ ನಡೆದಿದ್ದು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ದ್ವಿತೀಯ ವಾಣಿಜ್ಯ ವಿಭಾಗದ ಯಶಸ್, ಕಾರ್ಯದರ್ಶಿಯಾಗಿ ದ್ವಿತೀಯ ವಾಣಿಜ್ಯ ವಿಭಾಗದ ಚೇತನ್‌ರಾಜ್ ಮತ್ತು ಸಹಕಾರ್ಯದರ್ಶಿಯಾಗಿ ದ್ವಿತೀಯ ವಾಣಿಜ್ಯ ವಿಭಾಗದ ಅನುಪಮ ಆಯ್ಕೆಯಾದರು. ಪದವಿಪೂರ್ವ ವಿಭಾಗದ ಪ್ರಾಚಾರ್ಯರ ನೇತೃತ್ವದಲ್ಲಿ ಚುನಾವಣೆ ನಡೆಯಿತು.

# ಪದವಿ ವಿಭಾಗ

**ದಿನಾಂಕ 17–06–207 ಮತ್ತು 20–06–2017 ಶ್ರಮದಾನ**

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯ ಕಲ್ಲಡ್ಕ ಇಲ್ಲಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಂದ ಸಂಸ್ಥೆಯ ಸುಧೆಕ್ಕಾರಿನ ಗದ್ದೆಯಲ್ಲಿ ಪಪ್ಪಾಯಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು. ಶ್ರಮದಾನದಲ್ಲಿ 50 ವಿದ್ಯಾರ್ಥಿಗಳು ಭಾಗವಹಿಸಿ, 70 ಗಿಡಗಳನ್ನು ನೆಡಲಾಯಿತು. ಈ ಕಾರ್ಯಕ್ರಮದಲ್ಲಿ ಉಪನ್ಯಾಸಕರುಗಳಾದ ಹರೀಶ ಎ, ಸುನಿತಾ, ಯತಿರಾಜ್, ಅರವಿಂದ ಹಾಗು ಸಚಿನ್ ಸಹಕರಿಸಿದರು.

**ದಿನಾಂಕ 21–06–2017 3ನೇ ವಿಶ್ವ ಯೋಗ ದಿನಾಚರಣೆ**

ಶ್ರೀರಾಮ ಪದವಿ ವಿಭಾಗದ ಪ್ರತಾಪ



ಕ್ರೀಡಾಸಂಘದ ವತಿಯಿಂದ 3ನೇ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ದ.ಕ. ಜಿಲ್ಲೆಯ ವಿದ್ಯಾಭಾರತಿಯ ಜಿಲ್ಲಾ ಶಾರೀರಿಕ ಶಿಕ್ಷಣ ಪ್ರಮುಖ್ ಹಾಗೂ ಶ್ರೀರಾಮ ಪದವಿ ಪೂರ್ವ ವಿಭಾಗದ ದೈಹಿಕ ಶಿಕ್ಷಣ ನಿರ್ದೇಶಕ ಕರುಣಾಕರ್ ವಿಶೇಷ ಉಪನ್ಯಾಸ ನೀಡಿದರು.
ಯೋಗ ದಿನಾಚರಣೆಯ ಅಂಗವಾಗಿ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿದರು. ವೇದಿಕೆಯಲ್ಲಿ ಕ್ರೀಡಾಸಂಘದ ನಿರ್ದೇಶಕ ಅರವಿಂದ ಪ್ರಸಾದ ಉಪಸ್ಥಿತರಿದ್ದರು. ಉಪನ್ಯಾಸಕಿ ಶೈಲಜಾ ಸ್ವಾಗತಿಸಿ, ಉಪನ್ಯಾಸಕ ಯತಿರಾಜ್ ವಂದಿಸಿದರು.

**ದಿನಾಂಕ 27.06.2017 ಸಂಸ್ಕೃತ ಕಾರ್ಯಾಗಾರ**

ಮಂಗಳೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಶಿಕ್ಷಕರ ಕಾರ್ಯಾಗಾರವು ಉಡುಪಿ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ನಡೆಯಿತು.ಪದವಿ ವಿಭಾಗದ ಉಪನ್ಯಾಸಕಿ ಶ್ರೀಮತಿ ನಂದಿನಿ ಭಾಗವಹಿಸಿದ್ದರು.

**ದಿನಾಂಕ 29.06.2017 ಟೀಮ್ ವಿವೇಕ್ ಪರಿಚಯ ಕಾರ್ಯಕ್ರಮ**

ರಾಮಕೃಷ್ಣ ಆಶ್ರಮ ಇದರ ಆಶ್ರಯದಲ್ಲಿರುವ ಟೀಮ್ ವಿವೇಕ್ ಪರಿಚಯ ಕಾರ್ಯಕ್ರಮ ನಡೆಯಿತು. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಟೀಮ್ ವಿವೇಕ್‌ನ ಹಿನ್ನಲೆಯನ್ನು ಇದರ ಸದಸ್ಯರಾದ ಶ್ರೀವತ್ಸ ಮತ್ತು ಅರ್ಜುನ್ ವಿವರಿಸಿದರು.

**ದಿನಾಂಕ 30.06.2017 ಚುನಾವಣೆ**

2017–18ನೇ ಸಾಲಿನ ಕಾಲೇಜು ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆ ನಡೆಯಿತು. ಚುನಾವಣಾಧಿಕಾರಿಯಾಗಿ ಉಪನ್ಯಾಸಕ ಸಚಿನ್ ಕಾರ್ಯನಿರ್ವಹಿಸಿದರು. ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಜತೆ ಕಾರ್ಯದರ್ಶಿ ಸ್ಥಾನಕ್ಕೆ ತಲಾ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದರು.
ಅಧ್ಯಕ್ಷ ಸ್ಥಾನಕ್ಕೆ ಅಜಿತ್ ಕುಮಾರ್,(ಅಂತಿಮ ಬಿ.ಎ.), ಕಾರ್ಯದರ್ಶಿ ಸ್ಥಾನಕ್ಕೆ ಮಂಜುನಾಥ ಯಚ್ (ದ್ವಿತೀಯ ವಾಣಿಜ್ಯ ವಿಭಾಗ) ಹಾಗೂ ಜತೆ ಕಾರ್ಯದರ್ಶಿಯಾಗಿ ಅಖಿಲಾ (ದ್ವಿತೀಯ ವಾಣಿಜ್ಯ ವಿಭಾಗ) ಆಯ್ಕೆಯಾದರು.

---

**ಚಿತ್ರ ನೋಡಿ**  **ಶೀರ್ಷಿಕೆ ನೀಡಿ**

**ಪ್ರಿಯ ಓದುಗರೇ,**

**ಸರಯೂ ಈ ಶೈಕ್ಷಣಿಕ ವರ್ಷದ ಈ ಸಂಚಿಕೆಯೊಂದಿಗೆ ಮತ್ತೆ ಚಿತ್ರ ನೋಡಿ ಶೀರ್ಷಿಕೆ ನೀಡಿ ಎಂಬ ಅಂಕಣವನ್ನು ಆರಂಭಿಸಿದೆ. ಹಿಂದಿನ ಸಂಚಿಕೆಗಳಲ್ಲಿ ದೊರೆತ ಉತ್ತಮ ಸ್ಪಂದನೆ ಈ ಬಾರಿಯೂ ದೊರೆಯುವುದೆಂಬ ವಿಶ್ವಾಸದಲ್ಲಿ.....**

**ಈ ಚಿತ್ರಕ್ಕೆ ಸರಿಯಾದ ಶೀರ್ಷಿಕೆಯನ್ನು ಬರೆದು ಸರಯೂಗೆ ಕಳುಹಿಸಿ ಕೊಡಿ. ಉತ್ತಮ ಶೀರ್ಷಿಕೆಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಹೆಸರು ವಿಭಾಗ, ತರಗತಿ, ಊರು ಬರೆಯಲು ಮರೆಯದಿರಿ.**



## ಪ್ರಾಥಮಿಕ ಶಾಲೆ – ಆಗತ ಸ್ವಾಗತ –30.06.2017


"ಕೇದಾರ" ಉದ್ಘಾಟನೆ – ಶ್ರೀ ಬಾಪುಗೌಡ ದಂಪತಿ


"ಮಹೇಂದ್ರ" ಶಿಲಾನ್ಯಾಸ – ಶ್ರೀ ರಾಜೇಂದ್ರ


ನೂತನ ವಿದ್ಯಾರ್ಥಿಗಳಿಗೆ ಆರತಿ ಬೆಳಗಿದ ಮಾತಾಜಿಯರು








ನೂತನವಾಗಿ ನಿರ್ಮಾಣಗೊಂಡ "ಕೇದಾರ" ಕಟ್ಟಡದ ಉದ್ಘಾಟನೆ ಹಾಗೂ ಹೊಸತಾಗಿ ನಿರ್ಮಾಣಗೊಳ್ಳಲಿರುವ "ಮಹೇಂದ್ರ" ಸಮುಚ್ಚಯದ ಶಿಲಾನ್ಯಾಸ ಶ್ರೀ ಬಾಪು ಗೌಡ ದಂಪತಿಗಳು ಮತ್ತು ಶ್ರೀ ರಾಜೇಂದ್ರ ಕುಮಾರ್ ಉದ್ಯಮಿಗಳು ಮತ್ತು ರಾಜ್ಯ ಹೋಟೇಲ್ ಮಾಲಕರ ಸಂಘದ ಅಧ್ಯಕ್ಷರು ನೆರವೇರಿಸಿದರು.

ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳ ಪ್ರವೇಶೋತ್ಸವ ನಡೆಯಿತು. ಮಾತಾಜಿಯವರು ಮಕ್ಕಳಿಗೆ ಆರತಿ, ಅಕ್ಷತೆ, ತಿಲಕಧಾರಣೆ ಮಾಡಿ ಆಶೀರ್ವದಿಸಿದರು. ಅತಿಥಿಗಳು ದೀಪ ಬೆಳಗಿಸಿ, ಅಗ್ನಿಹೋತ್ರಕ್ಕೆ ಘೃತಾಹುತಿಯನ್ನು ಮಾಡಿದರು. ತದನಂತರ ವಿದ್ಯಾರ್ಥಿಗಳಿಂದ ಘೃತಾಹುತಿಯನ್ನು ಮಾಡಿಸಲಾಯಿತು. ವಿಶ್ವಾಸ್ ಹೆಗ್ಡೆ, ದೇಸಾಯಿ ಪಾಟೀಲ್, ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪ್ರಭಾಕರ ಭಟ್ ಕಲ್ಲಡ್ಕ ದಂಪತಿಗಳು, ವಿದ್ಯಾಕೇಂದ್ರದ ಸಂಚಾಲಕ ವಸಂತ ಮಾಧವ, ಗೋಪಿಕೃಷ್ಣ ಪುತ್ತೂರು, ಸತೀಶ್ ಭಟ್ ಶಿವಗಿರಿ, ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂತು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸತೀಶ್ ಭಟ್ ಸ್ವಾಗತಿಸಿ, ಶ್ರೀಮತಿ ಶೈನಿ ಮಾತಾಜಿ ನಿರೂಪಿಸಿ ವಂದಿಸಿದರು. ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಪ್ರೌಢಶಾಲಾ ವಿಭಾಗದ ಆಗತ–ಸ್ವಾಗತ 29.06.2017










ಪ್ರಕೃತಿ ಎಂಬುದು ಗುರುವಿದ್ದಂತೆ. ಪ್ರಕೃತಿಯ ಮಧ್ಯದಲ್ಲಿ ಬೆರೆತು ಕಲಿಯುವ ಶಿಕ್ಷಣ ಬದುಕಿಗೆ ದಾರಿ ತೋರಬಲ್ಲದು. ಈ ಶಿಕ್ಷಣ ಶ್ರೀರಾಮ ವಿದ್ಯಾಕೇಂದ್ರದಲ್ಲಿ ನೀಡುವುದು ಶ್ರೇಯಸ್ಕರ ಎಂದು ಕರ್ನಾಟಕ ಸರ್ಕಾರದ ವಿಧಾನ ಪರಿಷತ್ ಸದಸ್ಯರಾದ ಗೋ.ಮಧುಸೂದನ್ ತಿಳಿಸಿದರು.


ಡಾ। ಸವಿತಾ ರಾವ್ ಮಾತನಾಡಿ ಶ್ರೀರಾಮ ವಿದ್ಯಾಕೇಂದ್ರದಲ್ಲಿ ಸಿಗುವಂತಹ ಶಿಕ್ಷಣ ಇಡೀ ಭಾರತದಾದ್ಯಂತ ಸಿಗುತ್ತಿದ್ದರೆ ಭವಿಷ್ಯದಲ್ಲಿ ಭಾರತವನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲ. ಇಂತಹ ಶಿಕ್ಷಣ ಡಾ। ಪ್ರಭಾಕರ ಭಟ್‌ರವರ ಸಾರಥ್ಯದಲ್ಲಿ ಸಿಗುತ್ತಿರುವುದು ವಿದ್ಯಾರ್ಥಿಗಳ ಭಾಗ್ಯ ಎಂದು ತಿಳಿಸಿದರು.

ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ।ಪ್ರಭಾಕರ ಭಟ್ ಕಲ್ಲಡ್ಕ ಅವರು ಮಾರ್ಗದರ್ಶನ ನೀಡಿದರು. ನೂತನವಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳು ವೇದ ಘೋಷದೊಂದಿಗೆ ಅಗ್ನಿಹೋತ್ರಕ್ಕೆ ಹವಿಸ್ಸನ್ನು ಸಮರ್ಪಿಸಿ, ಹಿರಿಯರಿಂದ ತಿಲಕಧಾರಣೆ ಮಾಡಿಸಿ, ಆಶೀರ್ವಾದ ಪಡೆದರು. ಶ್ರೀ ನಾರಾಯಣ ಸೋಮಯಾಜಿ, ವೀರೇಶ್ ಕುಮಾರ್ ಉದ್ಯಮಿಗಳು ಮೈಸೂರು, ಶ್ರೀ ಸಿ. ತಿಪ್ಪೇಸ್ವಾಮಿ, ನಿವೃತ್ತ ಸಮಾಜ ಕಲ್ಯಾಣಾಧಿಕಾರಿ, ಶ್ರೀ ಸತ್ಯಪ್ರಸಾದ್ ಮೈಸೂರು, ವಿವೇಕಾನಂದ ವಿದ್ಯಾಸಂಸ್ಥೆಯ ಸಂಚಾಲಕರಾದ ಶ್ರೀ ಪ್ರಕಾಶ್ ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕರಾದ ಶ್ರೀ ವಸಂತಮಾಧವ, ಡಾ। ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ರಮೇಶ್ ಎನ್ ಸ್ವಾಗತಿಸಿ, ಸಹಶಿಕ್ಷಕಿ ಶ್ರೀಮತಿ ಸೌಮ್ಯ ಪಿ ವಂದಿಸಿದರು. 10ನೇ ಭರತ ತರಗತಿಯ ವಿದ್ಯಾರ್ಥಿನಿ ಗೌತಮಿ ನಿರೂಪಿಸಿದಳು.

## ಶ್ರೀರಾಮ ಪದವಿಪೂರ್ವ ವಿದ್ಯಾಲಯ ಕಲ್ಲಡ್ಕ ಆಗತ– ಸ್ವಾಗತ– 2017 ದಿನಾಂಕ 28.06.2017






ನೂತನವಾಗಿ ದಾಖಲಾತಿಗೊಂಡ ವಿದ್ಯಾರ್ಥಿಗಳು ಹೋಮ ಕುಂಡಕ್ಕೆ ಹವಿಸ್ಸು ಅರ್ಪಿಸಿ ಭಾರತಮಾತೆಗೆ ಪುಷ್ಪಾರ್ಚನೆಗೈದರು. ವೇದಿಕೆಯಲ್ಲಿದ್ದ ಹಿರಿಯರು ವಿದ್ಯಾರ್ಥಿಗಳಿಗೆ ತಿಲಕವಿಟ್ಟು ಆರ್ಶೀವದಿಸಿದರು. ವಿದ್ಯಾರ್ಥಿಗಳಲ್ಲಿ ಸಂಸ್ಕೃತಿ, ಸಂಸ್ಕಾರಗಳು ಜೀವನಕ್ಕೆ ಮೌಲ್ಯಗಳನ್ನು ನೀಡುತ್ತದೆ. ಬುದ್ಧಿವಂತಿಕೆಯ ಜೊತೆಗೆ ಸಾಂಸ್ಕೃತಿಕ, ಭಾವನಾತ್ಮಕ ,ಆಧ್ಯಾತ್ಮಿಕ ಅಂಶಗಳಿದ್ದಾಗ ಶಿಕ್ಷಣವು ಪರಿಪೂರ್ಣವಾಗುತ್ತದೆ ಹಾಗೂ ವೃತ್ತಿ ಧರ್ಮದ ಕುರಿತಾಗಿ ಹೇಳುತ್ತಾ ಉತ್ತಮ ಬದುಕಿನ ದಾರಿಯನ್ನು ವಿಶ್ಲೇಷಿಸುತ್ತ ಯೋಗದ ಮಹತ್ವವೆನೆಂಬುದನ್ನು ಹಿರಿಯ ಮಾರ್ಗದರ್ಶಕರಾದ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಅಧ್ಯಕ್ಷರು ವಿವೇಕಾನಂದರ ವಿದ್ಯಾವರ್ಧಕ ಸಂಘ ಪುತ್ತೂರು ಇವರು ಮಾರ್ಗದರ್ಶನ ಮಾಡಿದರು.

ಶ್ರೀಮತಿ ರೂಪಲೇಖ ಪಾಣಾಜೆ ಅಧ್ಯಕ್ಷರು ನರೇಂದ್ರ ಪಿ ಯು ಕಾಲೇಜ್ ತೆಂಕಿಲ ಪುತ್ತೂರು. ಶ್ರೀ ರವಿ ಪೂಜಾರಿ ಮಂಗಳೂರು , ,ಶ್ರೀ ಗಣೇಶ್‌ರಾವ್ ಮಂಗಳೂರು, ಶ್ರೀ ಮುರಳೀಧರ ಕೆದಿಲ, ಶ್ರೀ ಸತೀಶ್ ಕುಲಕರ್ಣಿ ಮುಂಬಯಿ,ಇವರು ಸಮಾರಂಭದ ಅತಿಥಿಗಳಾಗಿದ್ದರು. ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತಮಾಧವ, ಡಾ। ಕಮಲಾ ಪ್ರಭಾಕರ ಭಟ್, ಶ್ರೀ ನಾಗೇಶ್ ಕಲ್ಲಡ್ಕ ಆಡಳಿತ ಮಂಡಳಿಯ ಸದಸ್ಯರು, ಹಾಗೂ ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು ಸ್ವಾಗತಿಸಿ. ಕುಮಾರಿ ಶಿಲ್ಪ ಧನ್ಯವಾದಗೈದು, ಶ್ರೀಮತಿ ಕಾಜಲ್ ಕಾರ್ಯಕ್ರಮ ನಿರೂಪಿಸಿದರು.

## ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ ದಿನಾಂಕ 27–06–2017 ಆಗತ–ಸ್ವಾಗತ








2017–18ನೇ ಸಾಲಿನಲ್ಲಿ 8ನೇ ವರ್ಷದಲ್ಲಿ ಪ್ರವೇಶಗೊಂಡ ಪ್ರಥಮ ವರ್ಷದ ವಿದ್ಯಾರ್ಥಿಗಳ ಆಗತ–ಸ್ವಾಗತ ಕಾರ್ಯಕ್ರಮ ಅಜಿತಕುಮಾರ ಸಬಾಭವನದಲ್ಲಿ ನಡೆಯಿತು. ಒಟ್ಟು 116 ವಿದ್ಯಾರ್ಥಿಗಳು ಯಜ್ಞಕ್ಕೆ ಹವಿಸ್ಸನ್ನು ಅರ್ಪಿಸಿ ಬಳಿಕ ತಿಲಕಧಾರಣೆಗೈದು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ನಾರಾಯಣ ಸೋಮಾಯಾಜಿ ವಹಿಸಿದ್ದರು. ಅತಿಥಿಗಳಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ। ಲೋಕೇಶ್, ಶ್ರೀ ಯಜ್ಞ ನಾರಾಯಣ ಹೇರಳೆ ಉದ್ಯಮಿಗಳು ಬೆಂಗಳೂರು, Pixel infotech Pvt ltd ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ವಿಶ್ವನಾಥ ರೈ, ಮಾಣಿ ವಿಜಯಾ ಬ್ಯಾಂಕ್‌ನ ಶಾಖಾಧಿಕಾರಿ ಶ್ರೀ ಮಹೇಶ ಭಟ್, ಶ್ರೀ ವಿಶಾಲ್ ಹೆಗ್ಡೆ ಉದ್ಯಮಿಗಳು ಬೆಂಗಳೂರು ಆಗಮಿಸಿ ಪ್ರಥಮ ವರ್ಷದ ವಿದ್ಯಾರ್ಥಿಗಳ ವಿದ್ಯಾರ್ಥಿ ಜೀವನಕ್ಕೆ ಶುಭಹಾರೈಸಿದರು, ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ವಸಂತ ಮಾಧವ ಉಪಸ್ಥಿತರಿದ್ದರು.

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷ ಡಾ। ಪ್ರಭಾಕರ ಭಟ್ ಕಲ್ಲಡ್ಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ ಕಾಯರ್‌ಕಟ್ಟೆ ಪರಿಚಯಿಸಿ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ಸ್ವರ್ಣಕೀರ್ತಿ ವಂದಿಸಿ, ಭವ್ಯಶ್ರೀ ಕಾರ್ಯಕ್ರಮ ನಿರೂಪಿಸಿದರು.

ಸರಯೂ

KARKAN/2014/62363
Posted at Kalladka P.O.
on 10th and 15th of
Every month

Vol. : 4 Issue : 2 Rs. 10/-

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363